ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 2001 ರಿಂದ ಈವರೆಗೆ 100 ನಿರ್ಮಾಣ ಮಾಡಲಾಗಿದೆ.

ಆ) ರೂ. 12.87 ಕೋಟಿಗಳು ಬಂದಿದೆ.

ಎನ್.ಆರ್.ಹೆಚ್.ಎಂ. ಯೋಜನೆಯಡಿ ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳ ಸೇವೆಗಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ

896 (1145) ಶ್ರೀ ಮಂಜು ಎ (ಅರಕಲಗೂಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ಎನ್.ಆರ್.ಹೆಚ್.ಎಂ. ಯೋಜನೆಯಡಿ ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳ ಸೇವೆಗಾಗಿ ಬಂದಿರುವ ಅನುದಾನ ಮೊತ್ತವೆಷ್ಟು?

ಆ) ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಹಣ ನೀಡಿದೆ;

ಇ) 2009–10ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಇದುವರೆಗೆ ಆರೋಗ್ಯ ಕವಚ ಯೋಜನೆಗೆ ರೂ. 6.25 ಕೋಟಿಗಳು (ಫೆಬ್ರವರಿ 2010 ರ ಅಂತ್ಯದವರೆಗೆ) ಬಿಡುಗಡೆ ಮಾಡಲಾಗಿದೆ.

ಆ) ರಾಜ್ಯ ಸರ್ಕಾರದ ಆಯವ್ಯಯದಿಂದ ಇದುವರೆಗೆ ಈ ಯೋಜನೆಗಾಗಿ (ಫೆಬ್ರವರಿ 2010ರ ಅಂತ್ಯದವರೆಗೆ) ಒಟ್ಟು ರೂ. 20 ಕೋಟಿಗಳು ಹಾಗೂ 12 ನೇ ಹಣಕಾಸು ಆಯೋಗದಿಂದ ಹಂಚಿಕೆಯಾದ ರಾಜ್ಯದ ಪಾಲು ರೂ. 86.25 ಕೋಟಿಗಳು ಸೇರಿದಂತೆ ಒಟ್ಟು ರೂ. 106.25 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) 2009–10 ನೇ ಸಾಲಿನಲ್ಲಿ ಈ ಯೋಜನೆಗೆ ಎನ್.ಆರ್.ಹೆಚ್.ಎಂ. ವತಿಯಿಂದ ರೂ. 5 ಕೋಟಿಗಳು ರಾಜ್ಯ ಸರ್ಕಾರದ ಆಯವ್ಯಯದಿಂದ ರೂ. 10 ಕೋಟಿಗಳು ಹಾಗೂ 12ನೇ ಹಣಕಾಸು

ಆಯೋಗದ ವತಿಯಿಂದ ರಾಜ್ಯದ ಪಾಲಿಗೆ ಹಂಚಿಕೆಯಾದ ಹಣದಲ್ಲಿ ರೂ. 57.50 ಕೋಟಿಗಳು ಅಂದರೆ, ಒಟ್ಟಾರೆ ರೂ. 72.50 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಕೌಶಲ್ಯವರ್ಧನಾ ಕಾರ್ಯಕ್ರಮದಡಿಯಲ್ಲಿ ಯಾವ ಯಾವ ಕೌಶಲ್ಯ ತರಬೇತಿ ನೀಡಲಾಗುತ್ತಿದೆ

897 (1146) ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ನಿರುದ್ಯೋಗಿ ಯುವಕರ ಕೌಶಲ್ಯ ವರ್ಧನಾ ಕಾರ್ಯಕ್ರಮದಡಿಯಲ್ಲಿ ಯಾವ ಯಾವ ಕೌಶಲ್ಯ ತರಬೇತಿ ನೀಡಲಾಗುತ್ತದೆ;

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿರುವ ಆದೇಶದ ಪ್ರತಿ ಮತ್ತು ಮಾರ್ಗಸೂಚಿ ಪ್ರತಿಗಳನ್ನು ಒದಗಿಸಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮವು 16 ಕ್ಷೇತ್ರಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಪ್ರಾರಂಭಿಸಿದೆ. ಆ ಕ್ಷೇತ್ರಗಳು (ಸೆಕ್ಟರ್) ಕೃಷಿ, ಉತ್ಪಾದನೆ, ಅತಿಥ್ಯ, ಕಂಪ್ಯೂಟರ್ ತರಬೇತಿ, ಕಟ್ಟಡ ನಿರ್ಮಾಣ, ರೀಟೈಲ್, ಬಿಪಿಓ, ಜುವೆಲ್ಲರಿ, ಮಾಹಿತಿ ತಂತ್ರಜ್ಞಾನ, ಪ್ಯಾಬ್ರಿಕೇಷನ್, ಸೆಕ್ಯೂರಿಟಿ, ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್, ಬ್ಯೂಟೀಷಿಯನ್, ಕೆಮಿಕಲ್ ಮತ್ತು ಉಡುವು (ಗಾರ್ಮೆಂಟ್ಸ್).

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿರುವ ಆದೇಶದ ಪ್ರತಿ ಮತ್ತು ಮಾರ್ಗಸೂಚಿ ಪ್ರತಿಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಅನುಬಂಧ – 1

PROCEEDINGS OF THE GOVERNMENT OF KARNATAKA

Subject : Creation of Karnataka Vocational Training and Skill Development Corporation

Read : 1) Budget Speech 2007-08, made by Hon'ble Deputy Chief Minister